(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಜುಡಿಷಿಯಲ್ ಎನ್‌ಕ್ವೈರಿಯಾದರೆ ನಿಮ್ಮ ಬಣ್ಣ ಬಯಲಾಗುತ್ತದೆ. ಈ ರೀತಿ ರಾಜಕೀಯ ದೊಂಬರಾಟ ಮಾಡುವುದಕ್ಕೆ ಹೊರಟಿದ್ದೀರಿ.

(ಗೊಂದಲ)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರ.

ರಾಜ್ಯದಲ್ಲಿನ ಕೃಷಿ ಸಹಾಯಕರುಗಳ ಸಂಖ್ಯೆ

೨೯೬(೭೩೧) ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಒಟ್ಟು ಕೃಷಿ ಸಹಾಯಕರೆಷ್ಟು ?

ಆ) ನಾಲ್ಕನೇ ವೇತನ ಆಯೋಗದಲ್ಲಿ ವೇತನ ನಿಗಧಿಪಡಿಸಿರುವಾಗ ಕೃಷಿ ಸಹಾಯಕರ ವೇತನ ಇತರರಿಗಿಂತ ಕಡಿಮೆಯಾಗಿರುವುದನ್ನು ಸರ್ಕಾರವು ಗಮನಿಸಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು).—

ಅ) ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿರುವ ಕೃಷಿ ಸಹಾಯಕರ ಸಂಖ್ಯೆ ೭೭೧೧.

ಆ) ನಾಲ್ಕನೇ ವೇತನ ಆಯೋಗದಲ್ಲಿ ವೇತನ ನಿಗಧಿಪಡಿಸುವಾಗ ಕೃಷಿ ಸಹಾಯಕರ ವೇತನ ಇತರರಿಗಿಂತ ಕಡಿಮೆಯಾಗಿರುವ ಬಗ್ಗೆ ಕೃಷಿ ಸಹಾಯಕರ ಸಂಘದಿಂದ ಮನವಿ ಹಾಗೂ ಕೃಷಿ ನಿರ್ದೇಶಕರಿಂದ ಪತ್ರ ಸರ್ಕಾರಕ್ಕೆ ಬಂದಿದೆ. ಈ ಮನವಿಯ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲು ಆರ್ಥಿಕ ಇಲಾಖೆಯನ್ನು ಕೋರಲಾಗಿದೆ.

ಶ್ರೀ ಎಂ. ಎಸ್. ಆತ್ಮಾನಂದ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಇರತಕ್ಕಂಥ ಕೃಷಿ ಸಹಾಯಕರ ಸಂಖ್ಯೆ ಪ್ರಸ್ತುತ ಸಾಮಾರು ೭೭೧೧ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಮಂಜೂರಾಗಿರುವ ಈ ಕೃಷಿ ಸಹಾಯಕರ ಹುದ್ದೆಯ ಸಂಖ್ಯೆ ಎಷ್ಟು ? ಈ ಕೃಷಿ ಸಹಾಯಕರ ಕೊರತೆಯೇನಾದರೂ ಇದೆಯೇ ? ಈಗ ಗ್ರಾಮಾಂತರ ಪ್ರದೇಶದಲ್ಲಿ ಸಾಮಾನ್ಯವಾಗಿ ಎರಡು ಮೂರು ಮಂಡಳಿಗೆ ಒಟ್ಟು ಕೃಷಿ ಸಹಾಯಕರು ಇದ್ದು ಮೂಲಭೂತವಾಗಿ ಈ ರೈತರಿಗೆ ಕೃಷಿ ಸಹಾಯಕರ ಸೇವೆ ಸಿಗುತ್ತಿಲ್ಲ. ಕೊರತೆಯೇನಾದರೂ ಇದ್ದರೆ ಕೊರತೆ ತುಂಬುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ? ಕೃಷಿ ಸಹಾಯಕರಿಗೆ ವೇತನ ಆಯೋಗದಲ್ಲಿ ತಾರತಮ್ಯ ಆಗಿದೆ. ಈ ವೇತನ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಎಷ್ಟು ಶೀಘ್ರದಲ್ಲಿ ಕ್ರಮ ಕೈಗೊಳ್ಳುತ್ತದೆ ಎಂಬುದನ್ನು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ನಾವು ೧೨೮೦ ಮತ್ತು ೨೧೨೫ ಈ ಶ್ರೇಣಿಯಲ್ಲಿ ಸಂಬಳವನ್ನು ಅವರಿಗೆ ಕೊಡಬೇಕು ಎಂದು ಹೇಳಿ ೧೧-೩-೯೪ರಲ್ಲಿ ಆರ್ಥಿಕ ಇಲಾಖೆಯನ್ನು ಕೋರಿ ಕಾಗದವನ್ನು ಬರೆದಿದ್ದೇವೆ. ಆದರಂತೆ ಆಗಬಹುದು ಎಂಬ ನಿರೀಕ್ಷೆ ಇದೆ.

ಶ್ರೀ ಎಂ. ಎಸ್. ಆತ್ಮಾನಂದ.—ಕೃಷಿ ಸಹಾಯಕರ ಕೊರತೆಯೇನಾದರೂ ರಾಜ್ಯದಲ್ಲಿ ಇದೆಯೇ ಆ ರೀತಿ ಕೊರತೆ ಇದ್ದರೆ ಕೊರತೆಯನ್ನು ತುಂಬುವ ಬಗ್ಗೆ ಕ್ರಮದ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ತಿಳಿಸಲಿಲ್ಲ. ಕೃಷಿ ಸಹಾಯಕರ ಕೊರತೆ ಇದ್ದಲ್ಲಿ ಅದನ್ನು ಸರ್ಕಾರ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೊರತೆ ಅನೇಕ ಇಲಾಖೆಯಲ್ಲಿ ಕೆಲವು ನೌಕರರನ್ನು ಭರ್ತಿ ಮಾಡುವುದು ಇರಬಹುದು. ಆದರೆ ಭರ್ತಿ ಆಗಬೇಕಾದ ಖಾಲಿ ಇರತಕ್ಕಂಥ ಸ್ಥಳಗಳು ಎಷ್ಟು ಇದೆ ಎಂಬುದನ್ನು ತಿಳಿಸುವುದು ಕಷ್ಟವಾಗುತ್ತದೆ.

ಶ್ರೀ ಮುನಿನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಇವತ್ತು ಕೃಷಿ ಇಲಾಖೆಯಲ್ಲಿ ಏನಾದರೂ ಒಂದು ಉತ್ತಮವಾದ ಸಾಧನೆ ನಡೆದಿದೆ, ಒಂದು ಅಭಿವೃದ್ಧಿಯಾಗಿದೆ ಎಂದರೆ ಈ ಕೃಷಿ ಸಹಾಯಕರ ಸೇವೆ ಬಹಳ ಉತ್ತಮವಾಗಿರುವುದರಿಂದ ಎಂದು ಹೇಳಬೇಕಾಗುತ್ತದೆ. ಈ ರೀತಿ ಇರುವ ಸಂದರ್ಭದಲ್ಲಿ ಅವರು ತಮ್ಮ ಮೂಲ ವಿದ್ಯಾಭ್ಯಾಸದ ಜೊತೆಗೆ ಈ ಕೃಷಿ ಇಲಾಖೆಯಲ್ಲಿ ಒಂದು

ತರಬೇತಿಯನ್ನು, ಒಂದು ಪದವಿಯನ್ನು ಸಹ ಪಡೆದು ಗ್ರಾಮಾಂತರ ಪ್ರದೇಶದಲ್ಲಿ ಸುಮಾರು ಐದರಿಂದ ಹತ್ತು ಹಳ್ಳಿಪ್ರದೇಶಗಳಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಈ ಒಂದು ಳನೇ ವೇತನ ಆಯೋಗದಲ್ಲಿ ಅವರಿಗೆ ಸಿಯಾದ ರೀತಿಯಾದ ವೇತನವನ್ನು ಕೊಡದೆ ಸರ್ಕಾರ ಅನ್ಯಾಯ ಮಾಡಿರುವುದು ನಿಜಕ್ಕೂ ದುರದೃಷ್ಟಕರ. ಇದರ ಬಗ್ಗೆ ಇಲಾಖೆಯ ನಿರ್ದೇಶಕರು ಮತ್ತು ಕಾರ್ಯದರ್ಶಿಗಳು ಮೊದಲೇ ಆ ಆಯೋಗಕ್ಕೆ ಮಾಹಿತಿಯನ್ನು ಒಂದು ಪರದಿಯನ್ನು ಉತ್ತಮವಾಗಿ ಸಲ್ಲಿಸದೇ ಇರುವುದರಿಂದ ಈ ರೀತಿ ಅವರುಗಳಿಗೆ ಅನ್ಯಾಯವಾಗಿದೆ. ಮಾನ್ಯ ಮಂತ್ರಿಗಳಲ್ಲಿ ನಾನು ತಪ್ಪು ಮುಖೇನ ಮನವಿ ಮಾಡುತ್ತಿದ್ದೇನೆ, ಮಂತ್ರಿಗಳು ಮತ್ತು ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಇವರ ಬಗ್ಗೆ ಕೂಡಲೇ ಕ್ರಮಕೈಗೊಂಡು ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುವ ಐಳು ಸಾವಿರ ಬಿಲ್ಲರೆ ಕೃಷಿ ಸಹಾಯಕರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ಇವರನ್ನು ನೇಮಕ ಮಾಡಿದಾಗ ತ್ರೀಯೊಂದು ಗ್ರಾಮಕ್ಕೂ ಒಬ್ಬೊಬ್ಬರು ನೌಕರರು ವ್ಯವಸಾಯ ಇಲಾಖೆಯಲ್ಲಿ ಇರಬೇಕು ಎನ್ನುವ ಅಭಿಪ್ರಾಯ ಇತ್ತು. ಆದರೆ ಪೂರಾ ನೇಮಕ ಮಾಡಿರಲಿಲ್ಲ. ನೇಮಕ ಮಾಡತಕ್ಕಂಥ ಕಾಲದಲ್ಲಿ ಅನೇಕ ಸ್ಥಳಗಳ ಬಗ್ಗೆ ಯೋಚನೆ ಮಾಡದೆಯೇ ಅದು ಬಿಟ್ಟುಹೋಗಿತ್ತು. ಮಂತ್ರಿ ಇನ್ನೂ ಅನೇಕರು ಆ ಸ್ಥಳ ಬಿಟ್ಟಿದ್ದಾರೆ. ಈಗ ಅನೇಕ ಸಲಹೆ ಬರುತ್ತಿದೆ. ಈಗ ಗ್ರಾಮ ಪಂಚಾಯಿತಿಗಳು ಮಾಡುತ್ತಿಲ್ಲವೆ, ಆ ಪಂಚಾಯಿತಿ ಪ್ರದೇಶದಲ್ಲಾದರೂ ಕೂಡ ಒಬ್ಬ ವ್ಯವಸಾಯ ಇಲಾಖೆಯ ನೌಕರ ಇರಬೇಕು. ಅವನು ಸ್ವಲ್ಪ ಹೆಚ್ಚು ಈ ಇಲಾಖೆಯ ಕೆಲಸ ಕಾರ್ಯಗಳ ವಿಷಯದಲ್ಲಿ ತಿಳಿದವನಾಗಿರಬೇಕು. ಹಾಗೆ ಎನ್ನುವ ಅಭಿಪ್ರಾಯ ಕೂಡ ಇದೆ. ಅದನ್ನು ಸರ್ಕಾರ ಪರ್ಯಾಲೋಚನೆ ಮಾಡುತ್ತಿದೆ.

ಶ್ರೀ ಮುನಿನರಸಿಂಹಯ್ಯ.—ಅವರ ವೇತನದಲ್ಲಿ ಅನ್ಯಾಯವಾಗಿರುವುದನ್ನು ಸರಿಪಡಿಸಿಕೊಡುತ್ತೀರೋ ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಈ ಸದನದಲ್ಲಿ ಒಂದು ಆಶ್ವಾಸನೆಯನ್ನು ಕೊಡಬೇಕು ಎಂದು ತಮ್ಮ ಮುಖೇನ ಮನವಿ ಮಾಡಿಕೊಳ್ಳುತ್ತಿದ್ದೇನೆ. ಅವರ ವೇತನದಲ್ಲಿ ಏನು ಅನ್ಯಾಯವಾಗಿದೆ, ಅದನ್ನು ತಾವು ಸರಿಪಡಿಸಲಿಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತಿದ್ದೇನೆ,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ನೌಕರರನ್ನು ನೇಮಕ ಮಾಡಿಕೊಳ್ಳುವುದರಲ್ಲಿ ಮತ್ತೆ ಈ ವಿಷಯವನ್ನು ಪರ್ಯಾಲೋಚನೆ ಮಾಡಿ ಅವರ ವೇತನ ಶ್ರೇಣಿಯನ್ನು ಉತ್ತಮಪಡಿಸುವುದಕ್ಕೆ ಎಷ್ಟರಮಟ್ಟಿಗೆ ಸಾಧ್ಯ ಎಂಬ ಬಗ್ಗೆ ಆಲೋಚನೆ ಮಾಡುತ್ತೇನೆ ಸ್ವಾಮಿ.

ಮೂಡಿಗೆರೆ ಕ್ಷೇತ್ರದಲ್ಲಿ ಎನ್‌ಆರ್‌ಡಬ್ಲ್ಯೂಪಿ ಯೋಜನೆ

೨೬೭ (ಲಿಖಿತ) ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮೂಡಿಗೆರೆ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಅಲ್ಲೂರು, ವಸ್ತಾರೆ ಹೋಬಳಿಯ ಮೈಲಿಮನೆ, ಹೆಡದಾಳು, ಮೆಂಗಲಹಾಂದಿ, ಹೊಸಪೇಟೆ ಮತ್ತು ಸಾಲುಕುಂಬಿ ಇಲ್ಲಿನ ಎನ್‌ಆರ್‌ಡಬ್ಲ್ಯೂಪಿ ಸ್ಕೀಮ್‌ಗಳು ಹಾಳಾಗಲು ಕಾರಣವೇನು ?

ಆ) ಹೀಗಾಗದಂತೆ ತಡೆಯಲು ಸರ್ಕಾರ ಏನು ಕಠಿಣ ಕ್ರಮ ಕೈಗೊಳ್ಳುವುದು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).—

ಅ) ಚಿಕ್ಕಮಗಳೂರು ತಾಲ್ಲೂಕು, ವಸ್ತಾರೆ ಹೋಬಳಿ ಮತ್ತು ಅಲ್ಲೂರು ಹೋಬಳಿಗೆ ಸೇರಿರುವ ಮೈಲಿಮನೆ, ಮೆಂಗಲಹಾಂಧಿ, ಹೊಸಪೇಟೆ, ಹೆಡದಾಳು ಮತ್ತು ಸಾಲುಕುಂಬಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳಲ್ಲಿ ಈ ಕೆಳಕಂಡ ಕಾರಣಗಳಿಂದ ನೀರು ಪೂರೈಕೆಗೆ ತೊಂದರೆಯಾಗಿರುತ್ತದೆ.